**ದಿನಾಂಕಃ 06-03-2026 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯಿಂದ ಸ್ವತಃ –</u>**

1. ನಾನು ಗೇರು ಬೀಜ ಫ್ಯಾಕ್ಟರಿಯ ಮಾಲಿಕನಾಗಿರುತ್ತೇನೆ. ಈ ದಾವೆಯ ವಾದಿ ಮತ್ತು ಪ್ರತಿವಾದಿಯ ನಡುವೆ ಎರಡು ಕರಾರು ಆಗಿರುತ್ತವೆ. 2012 ರಿಂದ ನನಗೆ ಪ್ರತಿವಾದಿಯ ಪರಿಚಯ ಇರುತ್ತದೆ. ಪ್ರತಿವಾದಿಯ firm ನಲ್ಲಿ ನಾನು ಪಾಲುದಾರನಲ್ಲ. 2012-13 ರಿಂದ 2018-19 ರವರೆಗೆ ನಾನು ಪ್ರತಿವಾದಿಯಿಂದ ಗೇರು ಬೀಜವನ್ನು ಪಡೆದುಕೊಂಡು ಅದನ್ನು ನನ್ನ ಫ್ಯಾಕ್ಟರಿಯಲ್ಲಿ ಸಂಸ್ಕರಣೆ ಮಾಡಿ ವಾಪಾಸು ಪ್ರತಿವಾದಿಗೆ ನೀಡುತ್ತಿದ್ದೆ. ವಾಸರ ಕುದ್ರಿಗೆಯಲ್ಲಿ ಪ್ರತಿವಾದಿಯು ಗೋಡೌನು ಮತ್ತು ಫ್ಯಾಕ್ಟರಿಯನ್ನು ಪ್ರಾರಂಭ ಮಾಡುವ ಮುಂಚೆ ನನ್ನ ಜೊತೆ ಚರ್ಚೆ ಮಾಡಿದ್ದರು. ನಾನು ಪ್ರತಿವಾದಿಗೆ ವ್ಯವಹಾರದ ಸಲಹೆಗಾರನಾಗಿರುವುದಿಲ್ಲ.

2. ಪ್ರತಿವಾದಿಯನ್ನು ಕಳೆದ 10 ವರ್ಷಗಳಿಂದ ಪರಿಚಯ ಇರುತ್ತದೆ ಎಂದು ನಿಮ್ಮ ಮುಖ್ಯ ವಿಚಾರಣೆಯ ಬಾಬ್ತು ಸಲ್ಲಿಸಿದ ಪ್ರಮಾಣಪತ್ರದ 3 ನೇ ಪ್ಯಾರಾದಲ್ಲಿ ನೀವು ಹೇಳಿದ್ದು, ಸದ್ರಿ ಪ್ರಮಾಣಪತ್ರದ 4 ನೇ ಪ್ಯಾರಾದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಪ್ರತಿವಾದಿ ಹೊಸಬನಾಗಿದ್ದು ಆತನಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾರದ್ದೂ ಜಾಸ್ತಿ ಪರಿಚಯ ಇಲ್ಲ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಪ್ರತಿವಾದಿ ಗೋವಾದಿಂದ ಬಂದಿದ್ದು ಅವರಿಗೆ ಕನ್ನಡ ಭಾಷೆ ಬಾರದೇ ಇದ್ದು ನನ್ನನ್ನು ಹೊರತುಪಡಿಸಿ ಬೇರೆ ಸ್ಥಳಿಯರ ಪರಿಚಯ ಅವರಿಗೆ ಜಾಸ್ತಿ ಇಲ್ಲದ ಕಾರಣ ನಾನು ಪ್ರತಿವಾದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾರದ್ದೂ ಜಾಸ್ತಿ ಪರಿಚಯ ಇಲ್ಲ ಎಂದು ಹೇಳಿರುತ್ತೇನೆ.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 5 ನೇ ಪ್ಯಾರಾದಲ್ಲಿ ಹೇಳಿದ ಕರಾರು ವಾದಿ ಮತ್ತು ಪ್ರತಿವಾದಿಯ ನಡುವೆ ಆಗುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ನಾನು ಹೇಳಿದ ಎರಡು ಒಪ್ಪಂದಗಳ ಪೈಕಿ ಈ ದಾವೆಗೆ ಸಂಬಂಧಪಟ್ಟ ಒಪ್ಪಂದ ಯಾವದು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ಕರಾರುಗಳನ್ನು ನೋಡಿ ಅದರ ಆಧಾರದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಸರ ಕುದ್ರಗಿ ಯಲ್ಲಿರುವ ಪ್ರತಿವಾದಿಯ ಗೇರು ಬೀಜ ಸಂಸ್ಕರಣೆಯ ಘಟಕ ಮತ್ತು ಗೋಡೌನಿಗೆ ಎರಡುವಾರಕ್ಕೆ ಒಂದು ಸಲ ಹೋಗುತ್ತಿದ್ದೆ. ವಾದಿ ಮತ್ತು ಪ್ರತಿವಾದಿಯರ ಒಪ್ಪಂದದ ಪ್ರಕಾರ ಯೋಜನೆಯನ್ನು ಪೂರ್ಣಗೊಳಿಸಲು ಕೊನೆಯ ದಿನಾಂಕ 30.06.2016

ನಿಗಧಿಪಡಿಸಲಾಗಿತ್ತು ಎನ್ನುವುದು ಕರಾರಿನಲ್ಲಿ ಎಲ್ಲಿ ಉಲ್ಲೇಖಿಸಲಾಗಿದೆ ಎಂದು ನನಗೆ ತೋರಿಸಲು ಆಗುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಲ್ಲಿಸಿದ ಪ್ರಮಾಣಪತ್ರದ 8 ನೇ ಖಂಡಿಕೆಯಲ್ಲಿ ಪ್ರತಿವಾದಿಯು ಗೋವಾದಲ್ಲಿ ಇರುತ್ತಿದ್ದ ಕಾರಣ ಅಷ್ಟು ದೂರದಿಂದ ಬಂದು ಪ್ರತಿವಾದಿಗೆ ಗೋಡೌನು ಮತ್ತು ಪ್ಯಾಕ್ಟರಿಯ ಕಟ್ಟಡದ ಕಾಮಗಾರಿಯನ್ನು ನೋಡಲು ಆಗುತ್ತಿರಲಿಲ್ಲ ಎಂದು ಹೇಳಿರುತ್ತೇನೆ. ಪ್ರತಿವಾದಿಯ ಅನುಪಸ್ಥಿತಿಯಲ್ಲಿ ಸದ್ರಿ ಗೋಡೌನು ಮತ್ತು ಪ್ಯಾಕ್ಟರಿಯ ಕಟ್ಟಡದ ಕಾಮಗಾರಿಯ ಕೆಲಸವನ್ನು ನೋಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ನನ್ನ ಕೆಲಸ ಇದ್ದ ಕಾರಣ ಸದ್ರಿ ಗೋಡೌನು ಮತ್ತು ಪ್ಯಾಕ್ಟರಿಯ ಕಟ್ಟಡದ ಕಾಮಗಾರಿಯ ಕೆಲಸವನ್ನು ನನಗೆ ನೋಡಲು ತೊಂದರೆ ಇತ್ತು ಎನ್ನುತ್ತಾರೆ.

**(ಈ ಹಂತದಲ್ಲಿ ವಾದಿ ಸಾಕ್ಷಿಯ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು. )**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-
(ಪರಮೇಶ್ವರ ಪ್ರಸನ್ನ. ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ